ಸೃಜನಿ
SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 150-153
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಭಾಷೆ, ಸಾಹಿತ್ಯ ಮತ್ತು ತಂತ್ರಜ್ಞಾನ

**ಡಾ. ನಾಗರಾಜ ಡಿ. ಮುರಗೋಡ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜಿ. ಪಿ. ಪೋರವಾಲ ಕಲಾ, ವಾಣಿಜ್ಯ ಮತ್ತು ವ್ಹಿ. ವ್ಹಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

**Abstract:**
*ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯ ಮೇಲೆ ತಂತ್ರಜ್ಞಾನ ಬೀರಿದ ಪ್ರಭಾವವನ್ನು ಈ ಲೇಖನವು ಸಮಗ್ರವಾಗಿ ವಿಶ್ಲೇಷಿಸುತ್ತದೆ. ಶಿಲಾಶಾಸನಗಳು ಮತ್ತು ತಾಳೆಗರಿಗಳ ಕಾಲದಿಂದ ಆರಂಭವಾದ ಕನ್ನಡದ ಪಯಣವು ಇಂದು ಕೃತಕ ಬುದ್ಧಿಮತ್ತೆ (AI) ಮತ್ತು ಕ್ಲೌಡ್ ಕಂಪ್ಯೂಟಿಂಗ್ ಹಂತಕ್ಕೆ ತಲುಪಿರುವುದನ್ನು ಲೇಖನವು ಗುರುತಿಸುತ್ತದೆ. 19ನೇ ಶತಮಾನದ ಮುದ್ರಣ ತಂತ್ರಜ್ಞಾನದ ಆಗಮನದಿಂದ ಸಾಹಿತ್ಯವು ಜನಸಾಮಾನ್ಯರನ್ನು ತಲುಪಿದ ಇತಿಹಾಸ, 'ಬರಹ' ಮತ್ತು 'ನುಡಿ' ತಂತ್ರಾಂಶಗಳ ಮೂಲಕ ನಡೆದ ಕನ್ನಡ ಗಣಕೀಕರಣದ ಕ್ರಾಂತಿ, ಹಾಗೂ ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ಮಾನ್ಯತೆ ತಂದುಕೊಟ್ಟ ಯೂನಿಕೋಡ್ ತಂತ್ರಜ್ಞಾನದ ಪಾತ್ರವನ್ನು ಇಲ್ಲಿ ಚರ್ಚಿಸಲಾಗಿದೆ. ಇದರೊಂದಿಗೆ ಇಂಟರ್ನೆಟ್, ಬ್ಲಾಗ್‌ಗಳು, ಕನ್ನಡ ವಿಕಿಪೀಡಿಯಾ, ಸಾಮಾಜಿಕ ಮಾಧ್ಯಮಗಳು, ಇ-ಪುಸ್ತಕ ಹಾಗೂ ಆಡಿಯೋ ಪುಸ್ತಕಗಳು ಕನ್ನಡದ ಓದು ಮತ್ತು ಬರವಣಿಗೆಯ ಶೈಲಿಯನ್ನು ಹೇಗೆ ವಿಸ್ತರಿಸಿವೆ ಎಂಬುದನ್ನು ವಿವರಿಸುತ್ತದೆ. ತಂತ್ರಜ್ಞಾನದಿಂದ ಉಂಟಾಗುತ್ತಿರುವ 'ಕಂಗ್ಲಿಷ್' ಪ್ರವೃತ್ತಿ, ಓದುಗರ ಗಮನದ ಅವಧಿ ಕಡಿತ ಮತ್ತು ಪೈರಸಿಯಂತಹ ಸವಾಲುಗಳನ್ನು ಪ್ರಸ್ತಾಪಿಸುತ್ತಾ, ಭವಿಷ್ಯದ ಕ್ವಾಂಟಮ್ ಕಂಪ್ಯೂಟಿಂಗ್ ಯುಗದಲ್ಲೂ ಕನ್ನಡದ ಉಳಿವಿಗೆ ತಂತ್ರಜ್ಞಾನವೇ ರಾಜಮಾರ್ಗವಾಗಿದೆ ಎಂದು ಲೇಖನವು ಸಮರ್ಥಿಸುತ್ತದೆ.*

**Keywords:** *ಮುದ್ರಣ ತಂತ್ರಜ್ಞಾನ, ಕನ್ನಡ ಗಣಕೀಕರಣ, ಫೋನೆಟಿಕ್ ಕೀಬೋರ್ಡ್, ಬರಹ ಮತ್ತು ನುಡಿ ತಂತ್ರಾಂಶ, ಯೂನಿಕೋಡ್, ಕನ್ನಡ ವಿಕಿಪೀಡಿಯಾ, ಇ-ಪುಸ್ತಕಗಳು, ಕೃತಕ ಬುದ್ಧಿಮತ್ತೆ.*

## ಪೀಠಿಕೆ

ಭಾಷೆಯು ಕೇವಲ ಸಂವಹನದ ಮಾಧ್ಯಮವಲ್ಲ; ಅದು ಒಂದು ಸಂಸ್ಕೃತಿಯ, ಇತಿಹಾಸದ ಮತ್ತು ಜೀವಂತ ಸಮಾಜದ ಉಸಿರು. ಕಾಲದ ಓಟಕ್ಕೆ ತಕ್ಕಂತೆ ತನ್ನನ್ನು ತಾನು ನವೀಕರಿಸಿಕೊಳ್ಳುವ ಭಾಷೆ ಮಾತ್ರ ಇತಿಹಾಸದ ಪುಟಗಳಲ್ಲಿ ಅಮರವಾಗಿ ಉಳಿಯುತ್ತದೆ. ಈ ನಿಯಮಕ್ಕೆ ಜಗತ್ತಿನ ಅತ್ಯಂತ ಹಳೆಯ ಮತ್ತು ಸಮೃದ್ಧ ಭಾಷೆಗಳಲ್ಲೊಂದಾದ ಕನ್ನಡ ಭಾಷೆ ಅಪವಾದವಲ್ಲ. ಶಿಲಾ ಶಾಸನಗಳು, ತಾಳೆಗರಿಗಳು ಮತ್ತು ಹಸ್ತಪ್ರತಿಗಳಿಂದ ಆರಂಭವಾದ ಕನ್ನಡ ಸಾಹಿತ್ಯದ ಪಯಣ ಇಂದು ಕೃತಕ ಬುದ್ಧಿಮತ್ತೆಯ (Artificial Intelligence) ಕ್ಲೌಡ್ ಕಂಪ್ಯೂಟಿಂಗ್ ಪರದೆಯವರೆಗೆ ಬಂದು ತಲುಪಿದೆ. ತಂತ್ರಜ್ಞಾನದ ಪ್ರತಿ ಹಂತದ ಆವಿಷ್ಕಾರವೂ ಕನ್ನಡ

**Please cite this article as:** ನಾಗರಾಜ ಡಿ. ಮುರಗೋಡ. (2026). ಕನ್ನಡ ಭಾಷೆ, ಸಾಹಿತ್ಯ ಮತ್ತು ತಂತ್ರಜ್ಞಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಆಂಡ್ ಡೆವಲಪ್‌ಮೆಂಟ್*, 5(3), 150–153

ಭಾಷೆಯ ಉಳಿವು, ಬೆಳವಣಿಗೆ ಮತ್ತು ಪ್ರಸರಣಕ್ಕೆ ಹೊಸ ಚೈತನ್ಯವನ್ನು ನೀಡಿದೆ.

19ನೇ ಶತಮಾನದ ಆರಂಭದವರೆಗೆ ಕನ್ನಡ ಸಾಹಿತ್ಯವು ಕೇವಲ ರಾಜಾಶ್ರಯದಲ್ಲಿ ಅಥವಾ ಮಠ–ಮಾನ್ಯಗಳ ತಾಳೆಗರಿಗಳ ಸಂರಕ್ಷಣೆಯಲ್ಲಿ ಮಾತ್ರ ಇತ್ತು. ಭಾಷೆಗೆ ತಂತ್ರಜ್ಞಾನದ ಮೊದಲ ಸ್ಪರ್ಶ ಸಿಕ್ಕಿದ್ದೇ ಅಚ್ಚು ಮೊಳೆ (Printing Press) ತಂತ್ರಜ್ಞಾನದಿಂದ. ಬಾಸೆಲ್ ಮಿಷನ್‌ನಂತಹ ಕ್ರಿಶ್ಚಿಯನ್ ಮಿಷನರಿಗಳು ಕನ್ನಡ ಲಿಪಿಯ ಅಚ್ಚು ಮೊಳೆಗಳನ್ನು ತಯಾರಿಸಿ, ಪ್ರಥಮ ಬಾರಿಗೆ ಪುಸ್ತಕ ಮುದ್ರಣವನ್ನು ಆರಂಭಿಸಿದರು. ರೆವರೆಂಡ್ ಫರ್ಡಿನೆಂಡ್ ಕಿಟ್ಟೆಲ್ ಅವರ 'ಕನ್ನಡ – ಇಂಗ್ಲಿಷ್ ನಿಘಂಟು' ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಅಲ್ಲಿಯವರೆಗೆ ಕೇವಲ ವಿದ್ವಾಂಸರ ಸೊತ್ತಾಗಿದ್ದ ಪಂಪ, ರನ್ನ, ಜನ್ನ, ನಾಗಚಂದ್ರ, ಹರಿಹರ, ಷಡಕ್ಷರದೇವ ಹಾಗೂ ಕುಮಾರವ್ಯಾಸರಂತಹ ಮಹಾಕವಿಗಳ ಕಾವ್ಯಗಳು, ವಚನಕಾರರ ವಚನಗಳು ಮತ್ತು ದಾಸರ ಕೀರ್ತನೆಗಳು ಮುದ್ರಣಗೊಂಡು ಸಾಮಾನ್ಯ ಜನರ ಕೈ ಸೇರಿದವು. 1843ರಲ್ಲಿ ಪ್ರಕಟವಾದ 'ಮಂಗಳೂರು ಸಮಾಚಾರ' ಪತ್ರಿಕೆಯು ಕನ್ನಡದ ಪ್ರಥಮ ಪತ್ರಿಕೆಯಾಗಿ ಇತಿಹಾಸ ಸೃಷ್ಟಿಸಿತು. ಮುದ್ರಣ ತಂತ್ರಜ್ಞಾನದ ಮುನ್ನಡೆಯಿಂದಾಗಿ ಗದ್ಯ ಸಾಹಿತ್ಯ ಮತ್ತು ಲಲಿತ ಪ್ರಬಂಧಗಳ ಶೈಲಿ ಹೊಸ ರೂಪವನ್ನು ಪಡೆದುಕೊಂಡಿತು.

ಕಂಪ್ಯೂಟರ್ ಯುಗ ಆರಂಭವಾದಾಗ ಕನ್ನಡ ಲಿಪಿಯನ್ನು ಕಂಪ್ಯೂಟರ್ ಪರದೆಯ ಮೇಲೆ ತರುವುದು ಅತಿ ದೊಡ್ಡ ಸವಾಲಾಗಿತ್ತು. ಇಂಗ್ಲಿಷ್ ಕೀಬೋರ್ಡ್ ಮೂಲಕ ಸಂಕೀರ್ಣವಾದ ಕನ್ನಡ ಒತ್ತಕ್ಷರ ಮತ್ತು ಗುಣಿತಾಕ್ಷರಗಳನ್ನು ಮೂಡಿಸಲು ತಂತ್ರಜ್ಞರು ನಡೆಸಿದ ಹೋರಾಟ ಐತಿಹಾಸಿಕವಾದದ್ದು. ಕನ್ನಡ ಗಣಕಲೋಕದ ಪಿತಾಮಹ ಎಂದು ಕರೆಯಲ್ಪಡುವ ಪ್ರೊ. ಕೆ. ಪಿ. ರಾವ್ ಅವರು 'ಫೋನೆಟಿಕ್ ಕೀಬೋರ್ಡ್' (Phonetic Keyboard) ವಿನ್ಯಾಸಗೊಳಿಸಿದರು. ಇಂಗ್ಲಿಷ್‌ನಲ್ಲಿ 'ka' ಎಂದು ಟೈಪ್ ಮಾಡಿದರೆ ಕನ್ನಡದಲ್ಲಿ 'ಕ' ಎಂದು ಮೂಡುವ ಈ ಸರಳ ವಿನ್ಯಾಸವೇ ಇಂದು ಜಗತ್ತಿನಾದ್ಯಂತ ಕನ್ನಡಿಗರು ಮೊಬೈಲ್ ಮತ್ತು ಕಂಪ್ಯೂಟರ್‌ಗಳಲ್ಲಿ ಬಳಸುವ ಅತ್ಯಂತ ಜನಪ್ರಿಯ ಮಾಧ್ಯಮವಾಗಿದೆ. ಇವರು ಅಭಿವೃದ್ಧಿಪಡಿಸಿದ 'sediyapu' (ಸೆಡಿಯಾಪು) ಫಾಂಟ್ ಕನ್ನಡದ ಆರಂಭಿಕ ಡಿಜಿಟಲ್ ಹೆಜ್ಜೆಯಾಗಿದೆ. 1998 ರಲ್ಲಿ ಶೇಷಾದ್ರಿ ವಾಸು ಅವರು ಅಭಿವೃದ್ಧಿಪಡಿಸಿದ 'ಬರಹ' ಸಾಫ್ಟ್‌ವೇರ್ ಕನ್ನಡ ಸಾಹಿತ್ಯ ಲೋಕದಲ್ಲಿ ಕ್ರಾಂತಿ ಸೃಷ್ಟಿಸಿತು. ಇಂಟರ್ನೆಟ್ ಆರಂಭಿಕ ದಿನಗಳಲ್ಲಿ ಉಚಿತವಾಗಿ ಸಿಕ್ಕ ಈ ತಂತ್ರಾಂಶದಿಂದಾಗಿ ಸಾಮಾನ್ಯ ಜನರೂ ಕಂಪ್ಯೂಟರ್‌ನಲ್ಲಿ ಕನ್ನಡ ಬರೆಯಲು ಆರಂಭಿಸಿದರು. ಶ್ರೀ ಜಿ. ಎನ್. ನರಸಿಂಹಮೂರ್ತಿ ಮತ್ತು ಶ್ರೀ ಆನಂದ್ ಅವರ ನೇತೃತ್ವದ ಕನ್ನಡ ಗಣಕ ಪರಿಷತ್ತು ಕರ್ನಾಟಕ ಸರ್ಕಾರಕ್ಕಾಗಿ 'ನುಡಿ' ತಂತ್ರಾಂಶವನ್ನು ಸಿದ್ಧಪಡಿಸಿತು. ಸರ್ಕಾರ ಇದನ್ನು ಅಧಿಕೃತ ತಂತ್ರಾಂಶ ಎಂದು ಘೋಷಿಸಿದ್ದರಿಂದ ಆಡಳಿತ ವ್ಯವಸ್ಥೆ ಮತ್ತು ಕಚೇರಿಗಳಲ್ಲಿ ಕನ್ನಡದ ಬಳಕೆ ಸಂಪೂರ್ಣವಾಗಿ ಗಣಕೀಕೃತಗೊಂಡಿತು. ಕಂಪ್ಯೂಟರ್‌ಗಿಂತ ಮುಂಚಿನ ಟೈಪ್ ರೈಟರ್ ಯುಗದಲ್ಲಿ ಕನ್ನಡದ ವಿಶಿಷ್ಟ ಕೀಬೋರ್ಡ್ ವಿನ್ಯಾಸ ರೂಪಿಸಿದವರಲ್ಲಿ ವಿ. ಕೃಷ್ಣ ಅವರ ಶ್ರಮ ಅಪಾರವಾದದ್ದು. ಕನ್ನಡ ಭಾಷೆ ಜಾಗತಿಕ ಮಟ್ಟದ ಅಂತರಜಾಲದಲ್ಲಿ ಭದ್ರವಾಗಿ ಕಾಲೂರಲು ಕಾರಣವಾಗಿದ್ದು ಯೂನಿಕೋಡ್ (Unicode) ತಂತ್ರಜ್ಞಾನದಿಂದ. ಯೂನಿಕೋಡ್ ಬರುವ ಮುನ್ನ ಬರಹ ಅಥವಾ ನುಡಿಯ ಒಂದು ಫಾಂಟ್‌ನಲ್ಲಿ ಟೈಪ್ ಮಾಡಿದ ಪಠ್ಯವನ್ನು ಮತ್ತೊಂದು ಕಂಪ್ಯೂಟರ್‌ನಲ್ಲಿ ಓದಲು ಆಯಾ ನಿರ್ದಿಷ್ಟ ಫಾಂಟ್ ಇರಬೇಕಾಗಿತ್ತು. ಆದರೆ ಯೂನಿಕೋಡ್ ವಿಶ್ವದಾದ್ಯಂತ ಏಕರೂಪದ ಸಂಕೇತವನ್ನು ನೀಡಿತು. ಯೂನಿಕೋಡ್ ವ್ಯವಸ್ಥೆಯಿಂದಾಗಿ ಗೂಗಲ್

(Google), ಮೈಕ್ರೋಸಾಫ್ಟ್ (Microsoft), ಮತ್ತು ಆಪಲ್ (Apple) ನಂತಹ ದೈತ್ಯ ಸಂಸ್ಥೆಗಳು ತಮ್ಮ ಆಪರೇಟಿಂಗ್ ಸಿಸ್ಟಮ್‌ಗಳಲ್ಲಿ ಕನ್ನಡವನ್ನು ಅಂತರ್ಗತಗೊಳಿಸಿದವು. ಇಂದು ಗೂಗಲ್‌ನಲ್ಲಿ ಕನ್ನಡದಲ್ಲೇ ಹುಡುಕಾಟ (Search) ನಡೆಸಲು ಯೂನಿಕೋಡ್ ಕ್ರಾಂತಿಯೇ ಪ್ರಮುಖ ಕಾರಣವಾಗಿದೆ.

2000ದ ದಶಕದ ಆರಂಭವು ಕನ್ನಡ ಸಾಹಿತ್ಯವನ್ನು ಡಿಜಿಟಲ್ ಲೋಕಕ್ಕೆ ಪರಿಚಯಿಸಿತು. ಸಾಂಪ್ರದಾಯಿಕ ಪತ್ರಿಕೆಗಳ ಸಂಪಾದಕರ ಹಂಗಿಲ್ಲದೆ ಯುವ ಬರಹಗಾರರು ತಮ್ಮ ಕವಿತೆ, ಕಥೆ, ವೈಚಾರಿಕ ಲೇಖನಗಳನ್ನು ಪ್ರಕಟಿಸಲು 'ಬ್ಲಾಗ್‌ಗಳು' (Blogs) ವೇದಿಕೆಯಾದವು. ಇದು ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಹನ್ನು ಹೆಚ್ಚಿಸಿತು. ಜಾಗತಿಕ ಮುಕ್ತ ಜ್ಞಾನಕೋಶವಾದ ವಿಕಿಪೀಡಿಯಾದಲ್ಲಿ ಕನ್ನಡ ಆವೃತ್ತಿ ಆರಂಭವಾಯಿತು. ವಿಜ್ಞಾನ, ತಂತ್ರಜ್ಞಾನ, ಇತಿಹಾಸ, ಕಲೆ ಸೇರಿದಂತೆ ಹತ್ತಾರು ವಿಷಯಗಳ ಕುರಿತಾದ ಲಕ್ಷಾಂತರ ಲೇಖನಗಳು ಇಂದು ಉಚಿತವಾಗಿ ಕನ್ನಡದಲ್ಲಿ ಲಭ್ಯವಿದ್ದು, ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಡಿಜಿಟಲ್ ರೆಫರೆನ್ಸ್ ಗ್ರಂಥಗಳಾಗಿವೆ.

ಫೇಸ್‌ಬುಕ್, ಎಕ್ಸ್ (ಟ್ವಿಟರ್), ಇನ್‌ಸ್ಟಾಗ್ರಾಮ್ ಮತ್ತು ವ್ಯಾಟ್ಸಾಪ್‌ಗಳಂತಹ ಸಾಮಾಜಿಕ ಜಾಲತಾಣಗಳು ಕನ್ನಡ ಸಾಹಿತ್ಯವನ್ನು ಮತ್ತಷ್ಟು ವಿಸ್ತರಿಸಿವೆ. ಅಂದು ಸಾಹಿತ್ಯ ವೇದಿಕೆಗಳು ಕೇವಲ ಗಣ್ಯರಿಗೆ ಮಾತ್ರ ಸೀಮಿತವಾಗಿದ್ದ ಕಾಲವನ್ನು ತಂತ್ರಜ್ಞಾನ ಬದಲಾಯಿಸಿದೆ. ಇಂದು ಒಬ್ಬ ಸಾಮಾನ್ಯ ವ್ಯಕ್ತಿ ಸಾಮಾಜಿಕ ಜಾಲತಾಣದಲ್ಲಿ ಬರೆದ ಕವಿತೆಗೆ ಜಗತ್ತಿನ ಮೂಲೆ ಮೂಲೆಯಲ್ಲಿರುವ ಓದುಗರಿಂದ ತಕ್ಷಣವೇ ವಿಮರ್ಶೆ ಮತ್ತು ಲೈಕ್ಸ್ ರೂಪದಲ್ಲಿ ಪ್ರತಿಕ್ರಿಯೆ ದೊರೆಯುತ್ತದೆ. ಸಾಮಾಜಿಕ ಮಾಧ್ಯಮಗಳ ಕ್ಯಾರೆಕ್ಟರ್ ಮಿತಿಗಳಿಗೆ ಒಗ್ಗಿಕೊಳ್ಳುವಂತೆ ಸಾಹಿತ್ಯದ ಶೈಲಿಯೂ ಬದಲಾಗಿದೆ. ಎರಡು ಸಾಲಿನ ಕವಿತೆಗಳು, ಹನಿಗವನಗಳು, ಕಿರುಕಥೆಗಳು ಮತ್ತು ಸಮಕಾಲೀನ ವಿದ್ಯಮಾನಗಳನ್ನು ಹಾಸ್ಯಭರಿತವಾಗಿ ವಿಡಂಬನೆ ಮಾಡುವ 'ಮೀಮ್ಸ್' (Memes) ಹೊಸ ತಲೆಮಾರಿನ ಸಾಹಿತ್ಯಿಕ ಪ್ರಕಾರಗಳಾಗಿ ಹೊರಹೊಮ್ಮಿವೆ.

ಇ–ಪುಸ್ತಕಗಳು (e-Books) ಮತ್ತು ಆಡಿಯೋ ಪುಸ್ತಕಗಳ (Audio books) ತಂತ್ರಜ್ಞಾನವು ಪುಸ್ತಕ ಪ್ರಕಾಶನ ಮತ್ತು ಓದುವ ಸಂಸ್ಕೃತಿಯಲ್ಲಿ ದೊಡ್ಡ ಕ್ರಾಂತಿಯನ್ನು ತಂದಿವೆ. ಭೌತಿಕವಾಗಿ ಪುಸ್ತಕದ ಅಂಗಡಿಗೆ ಹೋಗಲಾಗದವರಿಗೂ ಸಾಹಿತ್ಯ ಈಗ ಕೈಬೆರಳ ತುದಿಗೆ ನೆಲಕುತ್ತಿದೆ. ಅಮೆಜಾನ್ ಕಿಂಡಲ್ (Kindle), ಮೈಲ್ಯಾಂಗ್ (MyLang)ಗಳು ಕುವೆಂಪು, ಕಾರಂತ ಮತ್ತು ಭೈರಪ್ಪ ರಂತಹ ಮುಂತಾದ ಪ್ರಮುಖ ಕಾದಂಬರಿಕಾರರ ಕಾದಂಬರಿಗಳು ಜಾಗತಿಕವಾಗಿ ಸ್ಮಾರ್ಟ್‌ಫೋನ್ ಗಳಲ್ಲೇ ಲಭ್ಯ ಇವೆ. ಕಾಗದ ರಹಿತ ಪರಿಸರಸ್ನೇಹಿ ಓದಿಗೆ ಇವು ದಾರಿ ಮಾಡಿಕೊಟ್ಟಿವೆ. ಕುಕು ಎಫ್‌ಎಂ (Kuku FM), ಪಾಕೆಟ್ ಎಫ್‌ಎಂ (Pocket FM), ಸ್ಟೋರಿ ಟೆಲ್ (Storytell), ಗಳಂತಹ ಆಡಿಯೋ ಪುಸ್ತಕಗಳು ಬ್ಯುಸಿ ಜೀವನಶೈಲಿಯಲ್ಲಿ ಓದಲು ಸಮಯವಿಲ್ಲದವರಿಗೆ ಕೇಳುವ ಸಂಸ್ಕೃತಿಯನ್ನು ನೀಡಿವೆಯಲ್ಲದೇ ದೃಷ್ಟಿ ವಿಕಲಚೇತನರಿಗೂ ಸಾಹಿತ್ಯವನ್ನು ತಲುಪಿಸುವ ಕಾರ್ಯವನ್ನು ಮಾಡುತ್ತಿವೆ. ಪಾಡ್‌ಕಾಸ್ಟ್‌ಗಳು (Podcasts) ಸ್ಪಾಟಿಫೈ (Spotify), ಯೂಟ್ಯೂಬ್(You Tube), ಗಳು ಕಥೆಗಳು, ಐತಿಹಾಸಿಕ ವಿಶ್ಲೇಷಣೆಗಳು ಮತ್ತು ಪ್ರಮುಖ ಸಾಹಿತಿಗಳ ಸಂದರ್ಶನಗಳನ್ನು ನೀಡಿ ಆಡಿಯೋ ಮತ್ತು ವಿಡಿಯೋ ರೂಪದಲ್ಲಿ ಜಾಗತಿಕ ಕನ್ನಡಿಗರನ್ನು ತಲುಪುತ್ತಿವೆ.

ಗೂಗಲ್ ಟ್ರಾನ್ಸ್‌ಲೇಟ್ ಇಂದು ಕನ್ನಡವನ್ನು ಜಗತ್ತಿನ ನೂರಾರು ಭಾಷೆಗಳಿಗೆ ತಕ್ಷಣವೇ ಅನುವಾದಿಸುವ ಮಟ್ಟಿಗೆ ನಿಖರತೆಯನ್ನು ಸಾಧಿಸುತ್ತಿದೆ. ಇದು ಜಾಗತಿಕ ಸಾಹಿತ್ಯವನ್ನು ಕನ್ನಡಕ್ಕೆ ತರಲು ಮತ್ತು ಕನ್ನಡದ ಪ್ರಮುಖ ಕೃತಿಗಳನ್ನು ಜಗತ್ತಿಗೆ ಪರಿಚಯಿಸಲು ಸೇತುವೆಯಾಗಿದೆ.

ಧ್ವನಿಯಿಂದ ಪಠ್ಯಕ್ಕೆ (Voice to Text) ಎಂಬ ತಂತ್ರಜ್ಞಾನವು ಕೀಬೋರ್ಡ್ ಬಳಸಿ ಟೈಪ್ ಮಾಡಲು ಕಷ್ಟಪಡುವ ಹಿರಿಯ ಸಾಹಿತಿಗಳಿಗೆ ಮತ್ತು ಸಾಮಾನ್ಯರಿಗೆ ಇಂದು ವರದಾನವಾಗಿದೆ. ಸ್ಮಾರ್ಟ್‌ಫೋನ್‌ನಲ್ಲಿ ಧ್ವನಿ ಮೂಲಕವೇ ಕನ್ನಡ ಟೈಪ್ ಮಾಡುವ (Voice Typing) ವಿಧಾನ ಅತ್ಯಂತ ಸರಳವಾಗಿದೆ.

ChatGPT, Google Gemini ಗಳಂತಹ ಆಧುನಿಕ AI ಪರಿಕರಗಳು ಕನ್ನಡದಲ್ಲೂ ಕವಿತೆ, ಪ್ರಬಂಧಗಳು ಹಾಗೂ ಲೇಖನಗಳನ್ನು ರಚಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಿವೆ. ಇದು ಮಾಹಿತಿ ಸಂಗ್ರಹಣೆ ಮತ್ತು ಭಾಷಾ ಸಂಶೋಧನೆಗೆ ಹೊಸ ವೇಗ ನೀಡಿದೆ. ಇಂದಿನ ತಂತ್ರಜ್ಞಾನದ ಅತ್ಯುನ್ನತ ಹಂತವೆಂದರೆ ಕೃತಕ ಬುದ್ಧಿಮತ್ತೆ (Artificial Intelligence) ಮತ್ತು ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ (NLP).

ತಂತ್ರಜ್ಞಾನವು ಅಪಾರ ಕೊಡುಗೆಗಳನ್ನು ನೀಡಿದ್ದರೂ, ಅದರೊಂದಿಗೆ ಕೆಲವು ಗಂಭೀರ ಸವಾಲುಗಳೂ ಎದುರಾಗುತ್ತಿವೆ. ತಂತ್ರಜ್ಞಾನದ ಅತಿಯಾದ ಬಳಕೆಯಿಂದಾಗಿ, ರೋಮನ್ ಲಿಪಿಯಲ್ಲಿ ಕನ್ನಡ ಬರೆಯುವ (ಉದಾಹರಣೆಗೆ: “Yellarigu Namaskara") ಕಂಗ್ಲಿಷ್ (Kanglish) ಪ್ರವೃತ್ತಿಯ ಅಭ್ಯಾಸ ಇಂದು ಹೆಚ್ಚಾಗುತ್ತಿದೆ. ಇದು ಮುಂದಿನ ಪೀಳಿಗೆಯಲ್ಲಿ ಕನ್ನಡ ಲಿಪಿಯ ಬಳಕೆಯನ್ನು ಕುಂಠಿತಗೊಳಿಸುವ ಅಪಾಯವನ್ನೂ ಸಹ ಹೊಂದಿದೆ. ಸೋಶಿಯಲ್ ಮೀಡಿಯಾದ ರೀಲ್ಸ್ ಮತ್ತು ಶಾರ್ಟ್ಸ್ ಸಂಸ್ಕೃತಿಯಿಂದಾಗಿ ಓದುಗರಲ್ಲಿ ಸುದೀರ್ಘವಾದ ಕಾದಂಬರಿಗಳನ್ನು ಅಥವಾ ಗಂಭೀರ ವೈಚಾರಿಕ ಸಾಹಿತ್ಯವನ್ನು ತಾಳ್ಮೆಯಿಂದ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಇ–ಪುಸ್ತಕಗಳು ಮತ್ತು ಆಡಿಯೋ ಕೃತಿಗಳು PDF ಅಥವಾ MP3 ರೂಪದಲ್ಲಿ ಅನಧಿಕೃತವಾಗಿ ಹಂಚಿಕೆಯಾಗುತ್ತಿರುವುದರಿಂದ ಲೇಖಕರಿಗೆ ಮತ್ತು ಪ್ರಕಾಶಕರಿಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ. ಅದು ಏನೇ ಇರಲಿ ಕನ್ನಡ ಭಾಷೆ ಹಾಗೂ ಸಾಹಿತ್ಯದ ಉಳಿವು ಮತ್ತು ವಿಕಾಸವು ತಂತ್ರಜ್ಞಾನವನ್ನು ನಾವು ಎಷ್ಟು ಸೃಜನಾತ್ಮಕವಾಗಿ ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ನಿರ್ಧಾರಿತವಾಗುತ್ತದೆ. ಕನ್ನಡ ಸಾಹಿತ್ಯವು ತಾಳೆಗರಿ ಮತ್ತು ಕಾಗದಗಳ ಮೇಲಿಂದ ಡಿಜಿಟಲ್ ಪರದೆಯ ವರೆಗೆ ಯಶಸ್ವಿಯಾಗಿ ಹೆಜ್ಜೆ ಇಟ್ಟಿದೆ. ಮುಂಬರುವ ಕ್ವಾಂಟಮ್ ಕಂಪ್ಯೂಟಿಂಗ್ ಹಾಗೂ ಸಂಪೂರ್ಣ AI ಯುಗದಲ್ಲೂ ಕನ್ನಡವು ತನ್ನ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಯಾಗಿಟ್ಟುಕೊಂಡು, ಜಾಗತಿಕ ಭಾಷೆಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲಲು ತಂತ್ರಜ್ಞಾನವೇ ರಾಜಮಾರ್ಗವಾಗಲಿದೆ.

**ಆಕರ ಗ್ರಂಥಗಳು**


- ಕನ್ನಡ ವಿಕಿಪೀಡಿಯ – ಒಂದು ಮುಕ್ತ ವಿಶ್ವಕೋಶ
- ನರಸಿಂಹಮೂರ್ತಿ, ಜಿ. ಎನ್. *ಗಣಕ ಜಗತ್ತು ಮತ್ತು ಕನ್ನಡ.* ಕನ್ನಡ ಗಣಕ ಪರಿಷತ್ತು.
- ನಿರಂಜನ ವಾನಳ್ಳಿ. *ಮಾಧ್ಯಮ ಮತ್ತು ಕನ್ನಡ ಸಾಹಿತ್ಯ.* ನವಕರ್ನಾಟಕ ಪ್ರಕಾಶನ.
- ಪವನಜ, ಯು. *ಬಿ. ಮಾಹಿತಿ ತಂತ್ರಜ್ಞಾನ ಮತ್ತು ಕನ್ನಡ.* ಕನ್ನಡ ವಿಶ್ವವಿದ್ಯಾಲಯ.
- ರಾವ್, ಕೆ.ಪಿ. ಮತ್ತು ತಂಡ (ಸಂ.), *ಗಣಕೀಕರಣ ಮತ್ತು ಕನ್ನಡ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ಸಣ್ಣಯ್ಯ, ಬಿ.ಎಸ್. *ಕನ್ನಡ ಮುದ್ರಣ ಇತಿಹಾಸ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಶ್ರೀನಿವಾಸ ಹಾವನೂರ, *ಕಿಟ್ಟೆಲ್ ಕೋಶ* ಮತ್ತು *ಕನ್ನಡ ಸಾಹಿತ್ಯ ವಿಕಾಸ.* ಕರ್ನಾಟಕ ವಿಶ್ವವಿದ್ಯಾಲಯ.